**ದಿಃ06.12.2025ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎಮ್. ವೈ. ಬಿ. ವಕೀಲರಿಂದ ಃ**

ಆದ್ದರಿಂದ ನಾನು ಅರ್ಜಿಯಲ್ಲಿ ಕೋರಿದಂತೆ ಆದೇಶ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ ಪಿ.ಟಿ.ಜಿ.ಕೆ ವಕೀಲರಿಂದಃ**

ಅಪಘಾತ ಕಾಲಕ್ಕೆ ನಾನು ಕುರುಲಿ ಪೆರಂಬೂರಿನಿಂದ ಪೆರೂರಿಗೆ ಹೊರಟಿದ್ದೆ. ನಾನು ಕಾಫಿ ತೋಟದಲ್ಲಿ ಕೆಲಸಕ್ಕೆ ಹೊರಟಿದ್ದೆ. ರಿಕ್ಷಾದಲ್ಲಿ 3 ಜನ ಪ್ರಯಾಣಿಕರು ಹೊರಟಿದ್ದೆವು. ಅಪಘಾತ ಕಾಲಕ್ಕೆ ರಿಕ್ಷಾ ಚಾಲಕ ವಾಹನವನ್ನು ಸಾವಕಾಶ ವಾಗಿ ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಆ ಅಪಘಾತದಲ್ಲಿ ನನಗೆ ಬಲ ಭುಜ, ಬಲ ಕೈ ನ ಮಧ್ಯದ ಬೆರಳಿಗೆ ಗಾಯ ಆಗಿತ್ತು. ಸಾಕ್ಷಿ ಮುಂದುವರೆದು ನನ್ನ ಬಲ ಭುಜಕ್ಕೆ ಶಸ್ತ್ರ ಚಿಕಿತ್ಸೆ ಆಗಿದೆ ಎನ್ನುತ್ತಾರೆ. ಅಪಘಾತವಾದ ಕೂಡಲೆ ನಾಪೋಕ್ಲು ಆಸ್ಪತ್ರೆಗೆ ಚಿಕಿತ್ಸೆಗೆ ಬಂದೆ. ನಾಪೋಕ್ಲುನಲ್ಲಿರುವ ಆಸ್ಪತ್ರೆ ಸರ್ಕಾರಿ ಆಸ್ಪತ್ರೆ ಎಂದರೆ ಸರಿ. ನಾಪೋಕ್ಲು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದ ನಂತರ ಮಡಿಕೇರಿ ಸರ್ಕಾರಿ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಬಂದೆ. ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಎಷ್ಟು ದಿನ ಚಿಕಿತ್ಸೆ ಪಡೆದಿದ್ದೇನೆಂದರೆ ಸಾಕ್ಷಿ ಸದರಿ ಆಸ್ಪತ್ರೆಯಲ್ಲಿ ಎರಡು ಗಂಟೆ ಕಾಲ ಇದ್ದೆ . ಆನಂತರ

ಸುಳ್ಯಕ್ಕೆ ಚಿಕಿತ್ಸೆಗೆ ಹೋದೆ ಎನ್ನುತ್ತಾರೆ. ಸುಳ್ಯದಲ್ಲಿ ಎಷ್ಟು ದಿನ ಚಿಕಿತ್ಸೆ ಪಡೆದಿರಿ ಎಂದರೆ ಸಾಕ್ಷಿ 7 ದಿನ ಅಲ್ಲಿ ಚಿಕಿತ್ಸೆ ಪಡೆದೆ ಎನ್ನುತ್ತಾರೆ. ಸುಳ್ಯ ದಲ್ಲಿ 7 ದಿನ ಚಿಕಿತ್ಸೆ ಪಡೆದು ಬಿಡುಗಡೆಯಾಗಿ ಬಂದ ನಂತರ ಹೊರರೋಗಿಯಾಗಿ ನಂತರ ಚಿಕಿತ್ಸೆ ಪಡೆದಿದ್ದೇನೆ. ನಾನು ಕೂಲಿ ಕೆಲಸ ಮಾಡುತ್ತೇನೆ. ದಿನಕ್ಕೆ ನನಗೆ 400 ರಿಂದ 500 ರೂ. ಕೂಲಿ ಇದೆ. ನನಗೆ ಪ್ರತಿದಿನ 400 ರಿಂದ 500 ರೂ. ಕೂಲಿ ಇದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಿಕ್ಷಾ ಚಾಲಕನಿಗೆ ಚಾಲನಾ ಪರವಾನಿಗೆ ಇತ್ತು. ಅಪಘಾತ ನಂತರ ನಾನು ಆರೋಗ್ಯವಾಗಿದ್ದು ಎಲ್ಲಾ ಕೆಲಸ ಕಾರ್ಯ ಮಾಡಬಲ್ಲೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಆದ ಗಾಯದಿಂದಾಗಿ ನನಗೆ ಯಾವುದೇ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಯ ಆಸ್ಪತ್ರೆಯಲ್ಲಿ 2,00,000/- ರೂ. ಚಿಕಿತ್ಸೆಗಾಗಿ ಖರ್ಚು ಮಾಡಿದ್ದೇನೆ. ನಾಪೋಕ್ಲು ಮತ್ತು ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರಿಂದ ನನಗೆ ಯಾವುದೇ ಖರ್ಚು ಬಂದಿಲ್ಲ ಎಂದರೆ ಸಾಕ್ಷಿ ಅಂಬುಲೆನ್ಸ್ ಗೆ ಖರ್ಚು ಮಾಡಿದ್ದೇನೆ ಎನ್ನುತ್ತಾರೆ. ನನ್ನ ತಪ್ಪಿನಿಂದಾಗಿ ಈ ಅಪಘಾತ ಸಂಭವಿಸಿರುವುದರಿಂದ 3ನೇ ಎದುರುದಾರರ ಸಂಸ್ಥೆ ನನಗೆ ಯಾವುದೇ ಪರಿಹಾರ ಕೊಡಲು ಬಾಧ್ಯಸ್ತ ಅಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ಈ ಅರ್ಜಿಯನ್ನು ದಾಖಲಿಸಿದ್ದೇನೆಂದರೆ ಸರಿಯಲ್ಲ. ಚಿಕಿತ್ಸೆಗಾಗಿ ಖರ್ಚು ಮಾಡಿದ್ದೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ಮತ್ತು 2ನೇ ಎದುರುದಾರರ ಪರ ಶ್ರೀ ಎಮ್ . ಹೆಚ್. ಟಿ. ವಕೀಲರಿಂದಃ</u>**

3ನೇ ಎದುರುದಾರರ ಪರ ವಕೀಲರು ಮಾಡಲಾದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**<u>ಮರುವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.